

'ಸುಜಿ, ಈಗ ಅದು ಸಾಧ್ಯವಿಲ್ಲ ಕಣೆ. ಮತ್ತೆ ಕರ್ಮಕಾಂಡಕ್ಕೆ ಬೀಳಬೇಕಾಗುತ್ತದೆ. ಹೇಗೋ ನನ್ನನ್ನು ಪತ್ತೆ ಹಚ್ಚಿ ಮತ್ತೆ ಕುವೈಟ್‌ಗೆ ರವಾನೆ ಮಾಡಿ ಬಿಡುತ್ತಾರೆ. ಅವನು ಫ್ರಾಡ್ ಎನ್ನುವ ವಿಷಯ ಸ್ವತಃ ಇವನ ಪರಿಚಯ ಮಾಡಿಸುವವನಿಗೇ ಸರಿಯಾಗಿ ತಿಳಿದಿರಲಿಲ್ಲ. ದುಕಾನೂ ಇರಲಿಲ್ಲ ಏನೂ ಇರಲಿಲ್ಲ. ಒಂದಿಷ್ಟು ದುಡ್ಡು ಅಪ್ಪನ ಕೈಯಲ್ಲಿಟ್ಟುಬಿಟ್ಟ. ನಿಕಾ ನಂತರ ಅವನೊಂದಿಗೆ ಮನೆ ಬಿಟ್ಟದ್ದು. ಮತ್ತೆ, ನಾನು ಎಲ್ಲಿದೀನಿ ಅನ್ನೋದೇ ನನಗೆ ಗೊತ್ತಿರಲಿಲ್ಲ ಕಣೆ.'

'ಮತ್ತೆ ಹೇಗೆ ನೀನು ಅಲ್ಲಿಂದ ತಪ್ಪಿಸಿಕೊಂಡೇ?

'ಒಂದು ಹುಡುಗಿಯಿಂದ.' ಅವಳೂ ನನ್ನ ಹಾಗೆ ದಿಕ್ಕು ದೆಸೆ ಇಲ್ಲದವಳು. ಯಾರದೋ ಕುತಂತ್ರದಿಂದ ಕುವೈಟ್ ಸೇರಿದವಳು. ನನ್ನ ಚಲನವಲನಗಳನ್ನು ಅವಳು ಗಮನಿಸುತ್ತಿದ್ದಳೆಂದು ಕಾಣುತ್ತದೆ. ನನ್ನ ಹಿಂದೆಯೇ ವಾಶ್ ರೂಂಗೆ ಬಂದಳು. 'ನಾನು ನಿನಗೆ ಸಹಾಯ ಮಾಡುತ್ತೀನಿ ನಿನ್ನ ಸಮಸ್ಯೆ ಏನು ?'ಎಂದಳು. ಅವಳ ಬಳಿ ಹಲವಾರು ಪಾಸ್ಪೋರ್ಟ್ ಇತ್ತು. ಅದರಲ್ಲಿ ಒಂದನ್ನು ನನಗೆ ತೆಗೆದು ಕೊಟ್ಟಳು. ಅದರಲ್ಲಿದ್ದ ಹೆಸರು ಮಾನಸ. ಅವಳ ಸಹಾಯದ ಋಣ ನನ್ನ ಮೇಲಿದೆ.'

'ಹಾಗಾದರೆ ನಿನ್ನ ಪಾಸ್ ಪೋರ್ಟ್ ಏನಾಯಿತು?'

'ಅದನ್ನು ಅವನು, ನನ್ನ ಗಂಡ ಎನಿಸಿಕೊಂಡವನು ತನ್ನ ಹತ್ತಿರವೇ ಇಟ್ಟುಕೊಂಡಿದ್ದ. ಅವನು ಹೇಳಿದ ಜಾಗಕ್ಕೆ ಹೋಗುವುದಷ್ಟೇ ನನ್ನ ಕರ್ತವ್ಯವಾಗಿತ್ತು. ಆ ಹುಡುಗಿ ಅವನೊಂದಿಗೆ ಮಾತನಾಡಿದಳು. ಬಹುಶಃ ಇವಳು ಅವನಿಗಿಂತಲೂ ಶಕ್ತಿಶಾಲಿ ಇರಬೇಕು. ಅವಳೇ ಟಿಕೆಟ್ ಕೂಡ ತೆಗೆದುಕೊಟ್ಟಳು. ನನಗೆ ಯಾಕೆ ಅವಳು ಸಹಾಯ ಮಾಡಿದಳು ಎಂದು ಇದುವರೆಗೂ ನನಗೆ ತಿಳಿದಿಲ್ಲ. ಅವಳು ನನ್ನನ್ನು ಮಾನಸಾಳಾಗಿ ಪರಿವರ್ತಿಸಿದಳು. ಅದಕ್ಕೆ ನಾನು ಹೇಳಿದ್ದು ಮಾನಸ ಆಗಿಯೇ ಉಳಿದು ಬಿಡುತ್ತೀನಿ ಎಂದು. ಸುಜಿ ನಿನಗೆ ನೆನಪಿದೆಯಾ ನೀನು ಕೆ. ಟಿ ಗಟ್ಟಿಯವರ ಕಾದಂಬರಿ ಓದಿ ಮುಸ್ಲಿಂ ಹುಡುಗ ಶಂಕರ ಆದ ಬಗೆಯನ್ನು ವರ್ಣಿಸಿದ್ದೆ. ಅದು ಅವನಿಗೆ ಅನಿವಾರ್ಯವಾಗಿತ್ತು ಎಂದು ಶಂಕರನ ಜಾಣ್ಮೆಯನ್ನು ಹೊಗಳಿದ್ದೆ. ಈಗ ನನ್ನ ಪರಿವರ್ತನೆಯ ಬಗ್ಗೆ ನಿನಗೇಕೆ ಇಷ್ಟವಿಲ್ಲ?'

'ಇದು ನನ್ನ ಇಷ್ಟದ ಪ್ರಶ್ನೆಯಲ್ಲ. ನಾನು ಯೋಚಿಸುತ್ತಿರುವುದು ನಿನ್ನ ಅಸ್ಮಿತೆಯ ಬಗ್ಗೆ. ನಿನ್ನ ಐಡೆಂಟಿಟಿಯ ಬಗ್ಗೆ. ಮುಂದೆ ನೀನು ಯಾರನ್ನಾದರೂ ಮದುವೆಯಾದರೆ ಅವನಿಗೆ ಇದರ ವಿಷಯವಾಗಿ ಆಕ್ಷೇಪಣೆ ಇರಬಾರದಲ್ಲ. ಮುಚ್ಚಿಟ್ಟರೆ ಅದು ಮೋಸವಾಗುವುದಲ್ಲ. ನಿನ್ನನ್ನು ಹೀಗೇ ಸ್ವೀಕರಿಸುವ ಪುಣ್ಯಾತ್ಮ ಸಿಗಬೇಕಲ್ಲ? ಆದ್ದರಿಂದ ನಾನು ಮೆಹರ್ ಬಗ್ಗೆ ಆಸಕ್ತಿ ವಹಿಸುತ್ತಿರುವುದು. ಇಪ್ಪತ್ತು ವರ್ಷಗಳು ನೀನು ಯಾವುದೋ ಸಿದ್ಧಾಂತಕ್ಕೆ ಬದ್ಧಳಾಗಿದ್ದೆ.